ಚಟ್ನಿ ಮೊಸರಿನ್ಯಾಗ ಕಲಿಸಿಕೆಂಡು ಭರ್ಜರಿ ಊಟ ಮಾಡಿಕೆಂಡು ಬಂದ ರೆಡ್ಡಿ. ಹೊಟ್ಟೆ ತುಂಬ ಊಟ ಆಗಿತ್ತು. ಹಿತ್ತಿಲುದಾಗಿನ ಬೇವಿನಗಿಡದ ಗಾಳ್ಯಾಗ ತಣ್ಣಗ ಕುರ್ಚಿ ಮ್ಯಾಗ ಕುಂತಗಂಡಲ್ಲೇ ನಿದ್ದಿ ಹತಿಗೆಂತು.

ಅಷ್ಟರಾಗ ಪೀಸಿ ಬಂದು ಮೆಲ್ಲಕ ಕೆಮ್ಮಿದ. ಕಣ್ ತೆಗ್ದು ಅವ್ನ್ ಕಡೆ ನೋಡಿದ ರೆಡ್ಡಿ.

"ಅವಾಗ್ಲಿಂದ ತಲೆ ತಿನಾಕತ್ಯಾಳ ಸರ್. ಕಾಲು ಕಾಲು ಹಿಡ್ಯಾಕೇ ಬರಾಕತ್ಯಾಳ. ನಿಮ್ಮ ಕೂಡ ಏನೋ ಮಾತಾಡಬೇಕಂತ."

ನಿದ್ದೆಗಣ್ಣಿನ್ಯಾಗ ಇದ್ದ ರೆಡ್ಡಿಗೆ ಪೀಸಿ ಏನು ಹೇಳಾಕತ್ಯಾನೋ ಜಲ್ದಿ ಅರ್ಥ ಆಗಲಿಲ್ಲ.

"ಅದೇ ಸಾರ್... ಗೋವಾದಾಕಿ. ನಿಮ್ ಕೂಡ ಮಾತಾಡಬೇಕಂತ."

ಆ ಮಾತಿಗೆ ಎಸ್ಸೈ ಕುರ್ಚಿ ಎತ್ತಿ ತನ್ ಮ್ಯಾಗ ಒಗೀತಾನೇನೋ ಅನಕಂಡ ಪೀಸಿ.

"ಯಾರ್ಲೇ ಆ ರಂಡಿಸೂಳೆ?"

"ಪದ್ಮ ಅಂತ ಸರ್ ಆಕಿ ಹೆಸ್ರು."

"ಏನು ಬೇಕಂತ?"

"ಗೊತ್ತಿಲ್ಲ ಸರ್. ಒಂದೇ ಸಲ ಕಲೇಬಿದ್ದಾಳ. ನಿಮ್ ಗುಟ ಮಾತಾಡ್ಬೇಕಂತ."

"ಕರಿ ನೋಡಾಂ."

ಆಕೀನ ಕರಿಯಾಕ ಹೋದ ಪೀಸಿ.

ಎರಡು ನಿಮಿಷದಾಗ ಆಕಿ ವರಾಂಡಾದಾಗ ಕಾಣಿಸಿಗೆಂಡ್ಲು. ಆಕಿ ವರಾಂಡಾ ಪಾಂಟಣಿಗಿ ಇಳ್ದು, ಹಿತ್ತಲದಾಗ ಬರಾದು ಕುಂತಗಂಡಲ್ಲೇ ನೋಡಿದ ರೆಡ್ಡಿ. ಆಕಿ ಕೂಡ ಆತನ್ನ ನೊಡಿಕೆಂತಲೇ ನಡಕಂಡು ಬಂದ್ಲು.

"ಏನು ಹೆಸ್ರು" ದೊಡ್ಡ ದನಿಯಾಗ ಕೇಳಿದ ರೆಡ್ಡಿ.

"ಪದ್ಮ ಸರ್."

"ಪೂರಾ ಹೆಸ್ರು?"

"ಪದ್ಮಾವತಿ ಸರ್"

"ಯಾ ವೂರ್?"

"ಗೋವಾ ಸರ್."

"ಖರೆವ್ ಹೇಳು" ಗದರಿಸಿ ಕೇಳಿದ ರೆಡ್ಡಿ.

ಆತನ ದನಿಗೆ ಬೆದರಿದಂಗಾದ್ಲು ಆಕಿ.

"ಸೊಂತೂರು ಜವಳಗೇರಿ ಬಗಲಾಗ ತುರಕಟ್ಟಿ ಸರ್. ಆದ್ರ ವೂರು ಬುಟ್ಟು ಭಾಳ ದಿನ ಆಗ್ಯಾದ್ರಿ. ಆಂಧ್ರದಾಗ ಸ್ವಲ್ಪ ದಿಸ ಇದ್ದೆ. ಈಗ ಗೋವಾಕ್ಕ ಹೋಗಿ ಎರಡು ವರ್ಷ ಆಗೇತ್ರಿ."

"ರಾಯಚೂರಿಗೆ ಬಂದು ಎಷ್ಟು ದಿನ ಆಯ್ತು?"

"ಮೂರು ತಿಂಗಳಾಯಿತು ಸರ್."

"ಮ್... ಏನೋ ಪರ್ಸನಲ್ ಆಗಿ ಮಾತಾಡಬೇಕು ಅಂದೆಂತ?"

ಹೌದು ಅಂಬಂಗ ಸುಮ್ನೆ ತಲೆ ಆಡಿಸಿದ್ಲು ಆಕಿ.

ರೆಡ್ಡಿ ಸಿಗರೇಟ್ ಹಚಿಗೆಂಡ. ಆಕೀ ಕಣ್ಣುಗಳು ಅತನ್ನೇ ನೋಡಾಕತ್ತಿದ್ವು. ಕೂದಲು ಗಟ್ಟಿಯಾಗಿ ಹಿಂದಕ ಎಳ್ದು ಜಡಿ ಹಾಕ್ಯಂಡಿದ್ಲು ಆಕಿ. ಕಣ್ಣು ರೆಪ್ಪೆಗಳ ನಡುವ ಸೌತೇಕಾಯಿ ಬೀಜದಂಗಿದ್ದ ಬೊಟ್ಟು. ಕಾಡಿಗೆ ಹಚಿಗೆಂಡ ಕಣ್ಣುಗಳು. ನೀಲಿ ಬಣ್ಣದ ಸೀರೆ. ಅದೇ ಬಣ್ಣದ ಕುಬಸ. ಸೀರೆ ಸೆರಗನ್ನ ಭುಜದ ಮ್ಯಾಗಿಂದ ಪೂರಾ ಸುತಿಗೆಂಡು, ಕೈ ಕಟಿಗೆಂಡು ನಿಂತಗಂಡಿದ್ಲು ಆಕಿ.